# ಮೇಹರ್‌ಜಾನ್‌ಳ ದುರಂತ ಪ್ರೇಮಕಥೆ

**ಯಲ್ಲಮ್ಮ ಕೆ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಜಿ.ವಿ.ಪಿ.ಪಿ. ಸ.ಪ್ರ.ದ. ಕಾಲೇಜು, ವಿಜಯನಗರ ಜಿಲ್ಲೆ.

**Received: 18/12/2024 ; Accepted: 10/01/2025 ; Published: 02/02/2025**

**DOI: https://doi.org/10.5281/zenodo.14788710**

## ABSTRACT:

ಮೊಘಲ್ ಚಕ್ರವರ್ತಿ ಷಹಜಹಾನ್ ತನ್ನ ಮೆಚ್ಚಿನ ಪತ್ನಿ 'ಮಮ್ತಾಜ್ ಮಹಲ್'ಳ ನೆನಪಿಗಾಗಿ ಕಟ್ಟಿಸಿದ 'ತಾಜ್ ಮಹಲ್' ಪ್ರೇಮಸೌಧ, ಹಾಗೂ ಮುಹಮ್ಮದ್ ಆದಿಲ್‌ಷಾನು ತನ್ನ 'ರಂಭಾ' ಎನ್ನುವ ದಾಸಿಯ ಮೇಲಿನ ಉತ್ಕಟ ಪ್ರೀತಿಯ ಕುರುಹಾಗಿ 'ಗೋಲ್ ಗುಂಬಜ್' ಸ್ಮಾರಕ ಲೋಕವಿಖ್ಯಾತಿಯನ್ನು ಪಡೆದಿರುವಂತೆ; 'ಮೆಹರ್‌ಜಾನ್'ಳ ದುರಂತ ಪ್ರೇಮಕತೆಯು ದಕ್ಷಿಣ ಭಾರತದ ಬಹುದೊಡ್ಡದೆನಿಸಿದ ವಿಜಯನಗರ ಸಾಮ್ರಾಜ್ಯದ ಅವನತಿಯ ಹಿನ್ನಲೆಯ ಮುಖ್ಯ ಕಾರ್ಯಕಾರಣ ಸಂಬಂಧವನ್ನು ತಿಳಿಯುವುದು.

ರಾಮರಾಯನ ಪ್ರೇಮ ನಿವೇದನೆಯನ್ನು ನಿಷ್ಕಲ್ಮಶ ಜೀವ-ಭಾವದಿ ಒಪ್ಪಿ-ಅಪ್ಪಿ, ಒಲಿದು ಬಂದ ಹೆಣ್ಣಿಗೆ ಪ್ರೀತಿಯ ರಸದೂಟವನ್ನುಣಬಡಿಸಿ ಒಡಲು ಮಡಿಲು ತುಂಬಿಸಿ, ಕೃಷ್ಣದೇವರಾಯನ ಮೆಚ್ಚುಗೆ, ರಾಣಿ ತಿರುಮಲಾಂಬಳೊಂದಿಗೆ ವಿವಾಹ, ಸಿಂಹಾಸನದ ಮೇಲಿನ ವ್ಯಾಮೋಹ ಇದೆಲ್ಲವನ್ನೂ ಮಹತ್ವಾಕಾಂಕ್ಷೆಯ ಸೋಗಿನಲ್ಲಿ ನಂಬಿ ಬಂದ ಹೆಣ್ಣಿನ ಪ್ರೀತಿಯನ್ನು ತುಚ್ಛವಾಗಿ ಕಂಡದ್ದರ ಫಲವಾಗಿ ಮುಂದೊಂದು ದಿನ ರಾಮರಾಯ ಬಹುದೊಡ್ಡ ಬೆಲೆಯನ್ನಲ್ಲದೆ ತನ್ನ ತಲೆಯನ್ನೇ ಕೊಡಬೇಕಾದ ಅನಿವಾರ್ಯತೆ ತಂದುಕೊಳ್ಳುತ್ತಾನೆ; ಇಲ್ಲಿ ವ್ಯಕ್ತಿ, ವ್ಯಕ್ತಿತ್ವ ಅಧಃಪತನವೂ ಒಂದು ಮಹೋನ್ನತ ಸಾಮ್ರಾಜ್ಯದ ಪತನಕ್ಕೆ ಕಾರಣವಾಗುವುದಲ್ಲದೆ, ಆತ್ಮಾಭಿಮಾನದ ಬಲದ ಗೆಲುವಾಗುತ್ತದೆ. 'ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ' ಎನ್ನುವ ಅರ್ಥದಿ 'ಪುರುಷನ ಏಳ್ಗೆಗೂ ಬೀಳ್ಗೆಗೂ ಕಾರಣಳು' ಆಗಬಲ್ಲಳು ಎಂಬುದಕ್ಕೆ ಮೆಹರ್‌ಜಾನ್‌ಳ ದುರಂತ ಪ್ರೇಮಕತೆ ಸ್ಪಷ್ಟ ನಿದರ್ಶನವಾಗಿದೆ.

## KEYWORDS:

ಮಂಜಿಕೆ, ಕಾಫಿರ್, ನಿಮಂತ್ರಣ, ಜನಾನ್‌ಖಾನೆ, ಯವನ, ಗೋಮು.

ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳಾಗಿದ್ದ ಹೊಯ್ಸಳರು, ಕಾಕತೀಯರು, ಯಾದವರು, ಉತ್ತರ ಭಾರತದ ಮುಸ್ಲಿಂರ ದಾಳಿಯಲ್ಲಿ ವಿನಾಶದ ಹಾದಿಯನ್ನಿಡಿದವು. ಈ ಭಾಗದಲ್ಲಿ ಉಂಟಾದ ರಾಜಕೀಯ ಅಸ್ಥಿರತೆಯಿಂದ ತಮ್ಮ ನಾಡು-ನುಡಿಯ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಬಲ್ಲ ಶಕ್ತಿ-ಸಾಮರ್ಥ್ಯಕ್ಕೆ ಧಕ್ಕೆಯುಂಟಾಗಿ, ಎದುರಾದ ಸಂದಿಗ್ದ ಪರಿಸ್ಥಿತಿಯಲ್ಲಿ ಅಂದು ನಾಡಿನಲ್ಲಿನ ಕೆಲವು ಮುತ್ಸದಿಗಳು ಎದೆಗುಂದದೆ ತಮ್ಮ ಶಕ್ತಿಯನ್ನೆಲ್ಲ ಒಗ್ಗೂಡಿಸಿ ಆತ್ಮಸಮ್ಮಾನವನ್ನು ಕಾಪಾಡಿಕೊಳ್ಳಲು ಮಾಡಿದ ಪ್ರಯತ್ನದ ಫಲವಾಗಿ ವಿದ್ಯಾರಣ್ಯರ ಮಾರ್ಗದರ್ಶ ನದಲ್ಲಿ ಹುಕ್ಕ-ಬುಕ್ಕರಿಂದ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಗೊಂಡು, ಸಂಗಮ, ಸಾಳುವ, ತುಳುವ, ಅರವೀಡು ಎಂಬ ಈ ನಾಲ್ಕು ವಂಶಗಳು ನೀಡಿದ ಕೊಡುಗೆ ಎಂದರೆ? ಭಾರತೀಯ ಸಂಸ್ಕೃತಿ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳ ರಕ್ಷಣೆಯ ಜೊತೆಗೆ ಪುನರುತ್ಥಾನಗೊಂಡಿರುವುದಾಗಿದೆ.

ತುಳು ವಂಶದ ಶ್ರೀಕೃಷ್ಣದೇವರಾಯನ ಕಾಲಾವಧಿಯು ಕನ್ನಡಿಗರ ಆತ್ಮಾಭಿಮಾನದ ಪ್ರತೀಕವಾಗಿತ್ತು. ಇಡೀ ದಕ್ಷಿಣ ಹಿಂದುಸ್ತಾನವು ಕೃಷ್ಣದೇವರಾಯನ ಸಾಮಿತ್ವಕ್ಕೆ ಒಳಪಟ್ಟಿತ್ತು. ಮುಸಲ್ಮಾನರಿಗೆ ಮುಂದೆ ಬಹು ದಿವಸದವರೆಗೆ ಕೃಷ್ಣದೇವರಾಯನ ಹಾಗೂ ಅವನ ದಂಡಾಳುಗಳ ಭಯ ತಪ್ಪಲಿಲ್ಲ. ಕೃಷ್ಣದೇವರಾಯನು ಜೀವದಿಂದಿರುವವರೆಗೂ ವಿಜಯನಗರದ ಮೇಲೆ ಸಾಗಿ ಬರಲಿಕ್ಕೆ ವಿಜಯಪುರದ ಆದಿಲ್‌ಷಹಾನಿಗೆ ಧೈರ್ಯವಾಗಲಿಲ್ಲ. 'ಮೂರು ರಾಯರ ಗಂಡ', 'ಕನ್ನಡ ರಾಜ್ಯ ರಮಾರಮಣ' ಹಾಗೂ 'ಆಂಧ್ರಭೋಜ' ಎಂದು ಬಿರುದಾಂಕಿತನಾಗಿ ದಕ್ಷ ಆಡಳಿತದ ಜೊತೆಗೆ; ಕೃಷ್ಣಸ್ವಾಮಿ, ಹಜಾರಸ್ವಾಮಿ, ವಿಜಯವಿಠಲನ ಗುಡಿ, ತುಂಗಭದ್ರ ಕಾಲುವೆ, ಬಸವನ ಕಾಲುವೆ, ಶ್ರೀಕೃಷ್ಣದೇವರಾಯನು ತನ್ನ ಹೆಂಡತಿ ನಾಗಲಾದೇವಿಯ ಸವಿನೆನಪಿಗೆ ನಾಗಲಾಪುರ ಈಗಿನ ಹೊಸಪೇಟೆಯನ್ನು ಕಟ್ಟಿಸುವುದರೊಂದಿಗೆ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀರೆರೆದು ಪೋಷಿಸಿದ್ದನು. ಸ್ವತ ಕವಿಯು-ಕಲಿಯೂ ಆಗಿದ್ದ ಈತ ತೆಲುಗು ಭಾಷೆಯಲ್ಲಿ 'ಅಮುಕ್ತಮೌಲ್ಯದ' ಕೃತಿಯನ್ನು ರಚಿಸುವ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಅಮೂಲ್ಯವಾದ ಕೊಡುಗೆಯನ್ನಿತ್ತದ್ದಾನೆ.

**ಮಹತ್ವಾಕಾಂಕ್ಷೆಯೇ ನೈತಿಕ ಅಧಃಪತನಕ್ಕೆ ಹಾದಿ:**

ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ, ಪುರಾಣದ ಪುಣ್ಯಕಥೆಗಳಲ್ಲಿ ಹಾಗೂ ಗತಕಾಲದಲ್ಲಿ ಹೂತು ಹೋಗಿರುವ ಎಲ್ಲ ಸಾಮ್ರಾಜ್ಯಗಳ ಹುಟ್ಟು, ಬೆಳವಣಿಗೆ ಮತ್ತು ಅವನತಿ ಹಾದಿಯ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿ ನೋಡಿದಾಗ ರಾಜ್ಯಾಧಿಕಾರದ ದಾಹ, ಸಂಪತ್ತಿನ

ವ್ಯಾಮೋಹದಿಂದ ಏನೆಲ್ಲ ಆಗಿ ಹೋಗಿವೆ ಎಂಬುದು ಎಣಿಕೆಗೆ ನಿಲುಕದ್ದು. ಅಂತೆಯೇ ಶ್ರೀಕೃಷ್ಣದೇವರಾಯನಿಗೆ ವಿಜಯನಗರ ಸಿಂಹಾಸನವು ತೀರಾ ಅನಾಯಾಸವಾಗಿ ದೊರೆತಿದ್ದಿಲ್ಲ. ತಮಗಿಂತಲೂ ಗಾದಿಯ ಮೇಲೆ ವಿಶೇಷ ಹಕ್ಕು ಹೊಂದಿರುವ ತಮ್ಮ ಮೂವರು ತಮ್ಮಂದಿರನ್ನು, ಒಬ್ಬ ಅಣ್ಣನ ಮಗನನ್ನೂ ಮಹತ್ವಾಕಾಂಕ್ಷೆಯಿಂದ ಸೆರೆಮನೆಯಲ್ಲಿಟ್ಟು ವಿಜಯನಗರ/ವಿದ್ಯಾನಗರದ ಪಟ್ಟವನ್ನೇರಿದ್ದನು. ಈತನ ಶೂರತ್ವಕ್ಕೆ ಒಂದು ನಿದರ್ಶನವನ್ನು ನೋಡುವುದಾದರೆ, 'ನೀನು ನನ್ನ ದರ್ಶನಕ್ಕೆ ಬಂದು ಮುಜುರೆ ಮಾಡಿ ನನ್ನ ಚರಣವನ್ನು ಚುಂಬಿಸಿದರೆ ನಾನು ಗೆದ್ದುಕೊಂಡಿದ್ದ ನಿನ್ನ ರಾಜ್ಯವನ್ನೆಲ್ಲ ನಿನಗೆ ತಿರುಗಿ ಕೊಡುವೆನು'ಎಂದು ಇಸ್ಮಾಯಿಲ್ ಆದಿಲಷಾಹನಿಗೆ ಅವನ ವಕೀಲನ ಮುಖೇನ ಸಂದೇಶ ರವಾನಿಸಿದ್ದು. 'ನಿರ್ದೋಷವಾದದ್ದು ಈ ಜಗತ್ತಿನಲ್ಲಿ ಯಾವುದಿರುತ್ತದೆ? ಅಂತೆಯೇ ವಿಜಯನಗರದ ಸಾಮ್ರಾಜ್ಯಕ್ಕೆ ಅಹಂಕಾರದ ಭಾದೆಯೂ ತಟ್ಟಿ, ಅದು ಮುಸಲ್ಮಾನರ ಮನಸ್ತಾಪದ ಪ್ರಖರತೆಯಲ್ಲಿ ತನ್ನ ಸರ್ವಸ್ವವನ್ನು ನಾಶಪಡಿಸಿಕೊಳ್ಳುವ ಹಾದಿಯನ್ನು ಹಿಡಿಯಿತು.

**ಕುರ್ನಿಸಾತ್ 'ವಿಶೇಷ ಪದ್ಧತಿಯ ನಮಸ್ಕಾರ':**

ಮುಸಲ್ಮಾನರು ಹಿಂದೂ ಅರಸರಿಗೂ, ಅವರ ಸಿಂಹಾಸನಕ್ಕೂ ಕುರ್ನಿಸಾತ್ ಮಾಡಲಿಕ್ಕಿಲ್ಲವೆಂದು ಹಠ ಹಿಡಿಯಲು; ವಿಜಯನಗರದ ಅರಸರು ಅಷ್ಟಕ್ಕಾಗಿ ಮುಸಲ್ಮಾನ ದಂಡಾಳುಗಳನ್ನು ಹೊರಗೆ ಹಾಕದೇ ದರ್ಬಾರ್‌ದಲ್ಲಿ ಸಿಂಹಾಸನದ ಮೇಲೆ ಕುರಾನ್ ಧರ್ಮಗ್ರಂಥವನ್ನು ಇಡುವ ಪದ್ಧತಿಯನ್ನು ಪ್ರಚಾರದಲ್ಲಿ ತಂದಿದ್ದರು. ಯಾರಾದರೂ ಈ ಸಂಬಂಧದಿಂದ ಮುಸಲ್ಮಾನರನ್ನು ಸಿಟ್ಟಿಗೆ ಎಬ್ಬಿಸಿದರೆ, ಅವರು ನಾವು ಹಿಂದು ಅರಸರಿಗೆ ಅಥವ ಅವರ ಸಿಂಹಾಸನಕ್ಕೆ ಕುರ್ನಿಸಾತವನ್ನು ಮಾಡದೇ ಕುರಾನ್‌ಗೆ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳುತ್ತಿದ್ದರು. ಇದರ ತಾತ್ಪರ್ಯವಿಷ್ಟೇ! ವಿಜಯನಗರದ ಅರಸರು ಮುಸಲ್ಮಾನ ದಂಡಾಳುಗಳ ಹಠವನ್ನು ನಡೆಯಿಸಿಯಾದರೂ ಅವರನ್ನು ತಮ್ಮ ಸೈನ್ಯದಲ್ಲಿ ಇರಿಸಿಕೊಳ್ಳುತ್ತಿದ್ದರು.

ಶ್ರೀಕೃಷ್ಣದೇವರಾಯನ ಕಾಲದಲ್ಲಿ ಹಿಂದು ಸರದಾರರ ವರ್ಚಸ್ಸು ವಿಶೇಷವಾಗಿತ್ತು. ರಾಜ್ಯದ ನಿಜವಾದ ಅಧಿಕಾರವು ಸರದಾರರ ಕೈಯಲ್ಲಿಯೇ ಇತ್ತೆಂದು ಹೇಳಬಹುದು. ಅಂಥ ಸರದಾರರಲ್ಲಿ ಮಹಾಪ್ರತಾಪಿಯಾದ ರಾಮರಾಜನೂ ಒಬ್ಬ. ಈತನ ಇನ್ನೊಂದು ಹೆಸರು ಕೋದಂಡರಾಮ. ಈತ ತನ್ನ ಶಕ್ತಿ-ಸಾಮರ್ಥ್ಯ, ರಾಜ ತಾಂತ್ರಿಕ ನಿಪುಣತೆಯಿಂದಾಗಿ ವಿಶೇಷತಃ ಶ್ರೀಕೃಷ್ಣದೇವರಾಯನ ಪ್ರೀತಿಗೆ ಪಾತ್ರನಾಗಿದ್ದ. ಪ್ರೀತಿಯ ಅಗಾಧತೆಯು ಎಷ್ಟಿತ್ತೆಂದರೆ? ತನ್ನ ಸ್ವಂತ ಮಗಳಾದ ತಿರುಮಲಾಂಬೆಯನ್ನು ಮದುವೆ ಮಾಡಿಕೊಟ್ಟು ಮನೆಯ ಅಳಿಯನ್ನನ್ನಾಗಿ ಮಾಡಿಕೊಳ್ಳಬೇಕೆಂಬ ಹಂಬಲವನ್ನು ಹೊಂದಿದ್ದನು.

**ಅಳಿಯ ರಾಮರಾಜ ಮತ್ತು ಮೇಹರ್‌ಜಾನ್‌ಳ ದುರಂತ ಪ್ರೇಮಕಥೆ:**

ಮುದುಗಲ್ ಕೋಟೆನಾಡಿನ ಸುತ್ತಮುತ್ತಲಿನ ಪ್ರದೇಶವು ಹುಲಿ, ಚಿರತೆ, ಕರಡಿಗಳು ಸೇರುವಷ್ಟು ದಟ್ಟವಾಗಿ ಇರಲಿಲ್ಲವಾದರೂ ಕಾಡಿನಿಂದ ತಪ್ಪಿಸಿಕೊಂಡ ಬಂದ ಹುಲಿಯೊಂದು ಮೇಳೆ-ಪೊದೆಗಳಲ್ಲಿ ಸೇರಿಕೊಂಡು ಆಗಾಗ್ಗೆ ಜನ ಮತ್ತು ಜಾನುವಾರುಗಳಿಗೆ ಉಪದ್ರವವನ್ನು ಕೊಡುತ್ತಲಿತ್ತು. ಇದನ್ನು ತಿಳಿದು ರಾಮರಾಜನು ಸ್ವತಃ ತಾನೇ ಹುಲಿ ಬೇಟೆಗಾಗಿ ಒಬ್ಬಂಟಿಯಾಗಿ ಬಂದಿದ್ದನು. ಒಂದು ಮರದಡಿ ಕುರಿ-ಮರಿಗಳನ್ನು ಕಟ್ಟಿಹಾಕಿ ಬೇಟೆಗಾಗಿ ಹೊಂಚುಹಾಕಿ ಮರವನ್ನೇರಿ ಕಾದು ಕುಳಿತಿದ್ದನು. ಅದೇ ದಾರಿಯಲ್ಲಿ ಸಂಗನಪಲ್ಲಿ ಮತ್ತ್ಯಾನ ದರ್ಗಾದ ದರ್ಶನಕ್ಕೆಂದು ಕುಟುಂಬ ಸಮೇತರಾಗಿ ತೆರಳುತ್ತಿದ್ದ ಗುಂಪಿನ ಓರ್ವ ತರುಣಿ ಮಾರ್ಗ ಮಧ್ಯೆ ನೀರನ್ನು ಅರಸಿ ಬಿಂದಿಗೆ ಹಿಡಿದು ನದಿ ನೀರಿಗೆ ಅತ್ತಕಡೆನೇ ಬರಲಾಗಿ ಮುದ್ದು ಮುದ್ದಾದ ಕುರಿಮರಿಗಳನ್ನು ಯಾವನೋ ದುಷ್ಟ ಕಟ್ಟಿಹಾಕಿದ್ದಾನೆ ಎಂದು ಮರುಗಿ ನಿಮ್ಮನ್ನು ಬಂಧನದಿಂದ ಬಿಡಿಸುವೆನೆಂದು ಬರಲಾಗಿ ಅದೇ ಸಮಯಕ್ಕೆ ಸರಿಯಾಗಿ ಹುಲಿಯು ಚಂಗನೆ ಹಾರಿ ಬಂದಿತು. ಇದನ್ನು ಕಂಡು ಒಂದು ಕ್ಷಣ ದಂಗಾಗಿ ರಾಮರಾಜನು ತನ್ನ ಪ್ರಾಣದ ಹಂಗನ್ನು ತೊರೆದು ಹುಲಿಯೊಂದಿಗೆ ಸೆಣಸಿ ಕೊಂದು ಹಾಕಿದನು. ಮೂರ್ಛೆಹೋದ ತರುಣಿಯನ್ನು ತನ್ನ ಕುದುರೆಯ ಮೇಲೆ ಹೊತ್ತು ಸಾಗಿ ವಿಜಯನಗರದ ಸಮೀಪದ 'ಕುಂಜವನ'ಕ್ಕೆ ತಂದು ಶೂಶ್ರುಷೆ ಮಾಡಿದನು. ಅವಳಲ್ಲಿ ಅನುರಾಗ ತಾಳಿದನು.

ತರುಣಿ ಮೇಹರ್‌ಜಾನ್‌ಳ ತಂದೆ ಖಾನ್‌ಜಮಾನ್ ಮೆಹಬೂಬ್‌ಖಾನ್ ಗೋವಳಕೊಂಡದ ದರ್ಬಾರ್‌ನಲ್ಲಿ ಒಬ್ಬ ಸರದಾರನಾಗಿದ್ದನು. ತನ್ನ ಮಗಳನ್ನು ಅಹಮದ್‌ನಗರದ ಬಾದಶಹನ ಮನೆತನದೊಡನೆ ಸಂಬಂಧ ಮಾಡಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದ. ವಿಜಯನಗರ ಹಾಗೂ ಮುಸಲ್ಮಾನ ರಾಜ್ಯಗಳ ಮೇರೆಯಲ್ಲಿದ್ದ ಸಂಗನಪಲ್ಲಿಯ ಶಹನವಾಜ್ ಪೀರರ ಗೋರಿಯ ದರ್ಶನಕ್ಕಾಗಿ ಪರಿವಾರ ಸಮೇತರಾಗಿ ಸಾಗುತ್ತಿದ್ದಾಗ ನಡೆದ ಈ ದುರ್ಘಟನೆಯಲ್ಲಿ ತಮ್ಮ ಮಗಳನ್ನು ಹುಲಿಯು ತಿಂದು ಹಾಕಿತು ಎಂದು ಭಾವಿಸಿರುತ್ತಾರೆ. ಅವಳು ಎಚ್ಚೆತ್ತು ನೋಡಿದಾಗ, ಎಲ್ಲ ವಿವರಗಳನ್ನು ತಿಳಿಸಿ ನಿಮ್ಮ ಪರಿವಾರದವರನ್ನು ಹುಡುಕಿಸುವುದಾಗಿ ಹೇಳಿ ಸಮಾಧಾನಿಸಿದನು. ಹುಡುಕಾಟದ ಸಮಯದಲ್ಲಿ ಅವಳ ಸಾಕುತಾಯಿಯಾದ ಮಾರ್ಜಿನೆಯು ಸಿಗಲು ಅವಳನ್ನು ಕರೆತಂದು ನಡೆದ ವೃತ್ತಾಂತವನ್ನೆಲ್ಲ ಹೇಳಿ, ಮುಂದುವರೆದು ಅವಳಲ್ಲಿ ತನ್ನ ಪ್ರೇಮದ ವಿಷಯವನ್ನು ನೀವೆದಿಸಿಕೊಳ್ಳುವ ಸಂದರ್ಭದ ಸಂವಾದವಿದು:

**ಮಾರ್ಜಿನೆ:** ರಾಜಾ, ಬಲತ್ಕಾರದಿಂದ ನಿಜವಾದ ಪ್ರೇಮ ಪ್ರೇಮೋದಯವಾಗದು;

ಸ್ವಸಂತೋಷದಿಂದಲೇ ಅದು ಸಾಧ್ಯ. 'ಸ್ವಾಭಾವಿಕ ಪ್ರೇಮವೆಂದರೆ? ರೂಪ. ಯೌವನ, ಐಶ್ವರ್ಯ, ಅಧಿಕಾರ, ಕೃತಜ್ಞತೆ ಮುಂತಾದ ಬಾಹ್ಯ ಕಾರಣಗಳೇನೂ ಇಲ್ಲದೇ ತಾನಾಗಿ ಉಂಟಾಗುವುದು ಪ್ರೇಮ. ಇಂಥ ಹೊರಗಿನ ಕಾರಣಗಳಿಂದುಂಟಾದ ಸಹೇತುಕ ಪ್ರೇಮಕ್ಕಿಂತ ಸ್ವಾಭಾವಿಕ ಪ್ರೇಮದ, ಅಂದರೆ ನಿರ್ಹೇತುಕ ಪ್ರೇಮದ ಯೋಗ್ಯತೆಯು ಹೆಚ್ಚಿನದು; ಯಾಕಂದರೆ? ಸೌಂದರ್ಯಾದಿ ಕಾರಣಗಳಿಂದುಂಟಾದ ಪ್ರೇಮ ಕಾರಣಗಳು ನಷ್ಟವಾದಾಗ ಕೂಡಲೇ ನಷ್ಟವಾಗುತ್ತದೆ; ಆದರೆ ಸ್ವಾಭಾವಿಕ ಪ್ರೇಮ ಹಾಗೆ ನಷ್ಟವಾಗುವುದಿಲ್ಲ. ಈ ಸ್ವಾಭಾವಿಕ ಪ್ರೇಮಕ್ಕೆ ಉದಾಹರಣವನ್ನು ಕೊಡುವುದು ನನಗಂತು ಶಕ್ಯವಿಲ್ಲ. ಸತ್ಪುರುಷರು ಮಾತ್ರ ಜಗತ್ತಿನ ಮೇಲೆ ಇಂಥ ಪ್ರೇಮ ಮಾಡುವರೆಂದು ತಿಳಿದಿರುವೆನು!.

ಪ್ರೇಮದ ಉತ್ಪತ್ತಿಗೆ ಸೌಂದರ್ಯಾದಿ ಬೇರೆ ಕಾರಣಗಳಿಗಿಂತ ವಿವಾಹವೆಂಬ ಕಾರಣ ಅತ್ಯಂತ ಪವಿತ್ರವಾದ ಕಾರಣವಾಗಿರುವುದರಿಂದಲೇ ವಿವಾಹ ಪದ್ಧತಿಯು ಸುಧಾರಿಸಿದ ಜನಾಂಗಗಳಿಗೆಲ್ಲ ಮಾನ್ಯವಾಗಿರುತ್ತದೆ. ವೈವಾಹಿಕ ಬಂಧನವಿಲ್ಲದ ನಿಮ್ಮ ಪ್ರೇಮದ ಐಕ್ಯಕ್ಕೆ ವ್ಯಭಿಚಾರದ ದೋಷವು ತಟ್ಟುವುದರಿಂದ ನೀವಿಬ್ಬರೂ ಜಗತ್ತಿನಲ್ಲಿ ಅಪಕೀರ್ತಿಗೂ, ದುಃಖಕ್ಕೂ ಕಾರಣರಾಗುತ್ತೀರಿ, ಎಂಬ ಎಚ್ಚರಿಕೆಯ ಮಾತುಗಳಿಗೆ ಕಿವಿಗೊಡದೆ, 'ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ' ಎಂಬ ಮಹಾತ್ಮರ ಉಕ್ತಿಯಂತೆ – ಇಂದ್ರಿಯಗಳ ಸಮೂಹ ವಿದ್ವಾಂಸನನ್ನಾದರೂ (ವಿದ್ವಾಂಸನ ಮನಸ್ಸನ್ನಾದರೂ) ಜಗ್ಗಿಕೊಳ್ಳುತ್ತದೆ ಎಂಬ ಮಾತು ಸುಳ್ಳಲ್ಲ. ರಾಮರಾಜನ ಮನಸ್ಸು ಮೇಹರ್‌ಜಾನ್‌ಳೆಡೆಗೆ ವಾಲುತ್ತದೆ.

**ರಾಮರಾಜ:**

ಒಮ್ಮೆ ವಚನ ಕೊಟ್ಟ ಬಳಿಕ ಅದರಂತೆ ನಡೆಯುವುದು ಪೌರುಷಕ್ಕೆ ಒಪ್ಪುವ ಮಾತಾಗಿತ್ತು. ಅಂತೆಯೇ 'ಒಳ್ಳೆಯ ಕುದುರೆಗೊಂದು ಗೋಮುವೆಂಬಂತೆ' ಒಳ್ಳೆಯ ಜನರಲ್ಲಿ ಒಂದೊಂದು ಗೋಮು ಇರುವುದುಂಟು. 'ಜರಿದಂತೆ ಅರ್ಜುನನ ಪರಾಕ್ರಮವು; ಹೊಗಳಿದಂತೆ ಕರ್ಣನ ಪರಾಕ್ರಮವು ಹೆಚ್ಚುತ್ತಿತ್ತು. ಇದರ ವಿರುದ್ಧ ಸ್ಥಿತಿಯೊದಗಿದಾಗ ಅವರುಗಳ ಪರಾಕ್ರಮಗಳು ಕುಗ್ಗುತ್ತಿದ್ದವು'. ಶ್ರೀಕೃಷ್ಣದೇವರಾಯನು ತನ್ನ ಸ್ವಂತ ಮಗಳನ್ನು ತನಗೆ ಮದುವೆ ಮಾಡಿಕೊಟ್ಟು, ದೊಡ್ಡ ಪದವಿಗೇರಿಸಿ, ಮನೆ ಅಳಿಯನನ್ನಾಗಿ ಮಾಡಿಕೊಳ್ಳುತ್ತಾನೆ ಎಂಬ ವರ್ತಮಾನವ ಕೇಳಿ ರಾಮರಾಜನು ಮಹತ್ವಾಂಕಾಕ್ಷೆಯಿಂದ 'ರಾಜಕಾರಣಗಳಲ್ಲಿ ಪ್ರಸಂಗಕ್ಕನುಸರಿಸಿ ಸೋಗು ಹಾಕಬೇಕಾಗುತ್ತದೆಂಬ' ಮಾತು ಆಕೆಗೆ ತಿಳಿಯಬಾರದೇನು? ಎಂದು ತನ್ನ ನಡೆಯನ್ನು ಸಮರ್ಥಿಸಿಕೊಂಡು ಮೇಹರ್‌ಜಾನ್‌ಳ ವಿಷಯದಲ್ಲಿ ವಚನಭಂಗದ ಹಾದಿಯನ್ನು ಹಿಡಿದನು. ಪ್ರೇಮಪಾಶ ಮತ್ತು ಸ್ತ್ರೀ–ಅಪಮಾನಗಳೇ ಮುಂದೆ ಉರುಲಾಗಿ ಕಾಡಿದವು.

'ರಕ್ತ ಸಂಬಂಧವಿದ್ದ ಕಡೆಗೆ ಮನಸ್ಸು ಒಲಿಯತಕ್ಕದ್ದು' ಎಂಬ ಮಾತಿದ್ದರೂ ವಿಧಿವಿಪರ್ಯಾಸವೆಂಬಂತೆ ರಣಮಸ್ತಖಾನ್‌ನ ಕುರಿತಾದ ಪುತ್ರ ವಾತ್ಸಲ್ಯದಿ ಬಲವಾದ ನಂಬಿಕೆ, ಇವೆಲ್ಲವಕ್ಕೂ ಇಂಬು ಕೊಡುವಂತೆ ಆವರಿಸಿದ ವೃದ್ಧಾಪ್ಯ.

**ಮೇಹರ್‌ಜಾನ್:**

ಮೂಲತಃ ಹಠದ ಸ್ವಭಾವದ ತರುಣಿಯಾದ ಮೇಹರ್‌ಜಾನ್ ತನ್ನ ಸಾಕುತಾಯಿ ಮಾರ್ಜಿನೆಯ ಮಾತನ್ನು ಲೆಕ್ಕಿಸದೇ, ತನ್ನ ಪ್ರಾಣದ ಹಂಗನ್ನು ತೊರೆದು ನನ್ನ ಪ್ರಾಣವನ್ನು ಉಳಿಸಿದ ರಾಮರಾಜನಲ್ಲಿ ಅದಾಗಲೇ ಅನುರಕ್ತಳಾಗಿದ್ದಳು. 'ಪಠಾಣ ತರುಣಿಯರು ಒಬ್ಬ ಪುರುಷನಲ್ಲಿ ಮನಸ್ಸನ್ನಿಟ್ಟ ಬಳಿಕ, ಅನ್ಯ ಪುರುಷರನ್ನು ಪಿತೃ ಸಮಾನರೆಂತಲೇ ತಿಳಿಯುವರು! ಭವಿತವ್ಯತೆಯನ್ನು ತಪ್ಪಿಸುವುದು ಯಾರಿಂದಲೂ ಆಗದು' ಎಂದು ಪ್ರೇಮ ವಿವಾಹವಾಗಿ ಬಾಳಿಗೊದಗಿ ಬಂದ ವಸಂತ ಕಾಲದಲ್ಲಿ ನವ ವಧು-ವರರು; ಹಿಟ್ಟು ಚೆಲ್ಲಿದಂತಿರುವ ಬೆಳದಿಂಗಳಿರುಳಿನಲಿ ಕುಂಜನವನದ ಪುಷ್ಕರಣಿಯಲ್ಲಿ ಜೋಡಿ ಹಂಸಗಳಾಗಿ ವಿಹರಿಸಿದರು. ತನ್ನ ಅನುಪಸ್ಥಿತಿಯಲ್ಲಿ ಕಾವಲಿಗೆಂದು ಕುಂಜನವನಕ್ಕೆ ನೆಚ್ಚಿನ ಭಂಟನಾದ ಧನಮಲ್ಲನನ್ನು ಇರಿಸುವುದನ್ನು ಮರೆಯಲಿಲ್ಲ.

'ಶರೀರ ಸುಖದಿಂದಿರೆ, ಎಲ್ಲದರಿಂದ ಸುಖ'; ನಿದ್ದೆಯು ಯಾರ ಕೈಯೊಳಗಿನದೂ ಅಲ್ಲ. ನಿದ್ದೆ ಮಾಡಬೇಕೆನ್ನುವವರಿಗೆ ಅದು ಬರುವುದೇ ಇಲ್ಲ, ನಿದ್ದೆ ಮಾಡಬಾರದೆನ್ನುವವರನ್ನು ಮಾತ್ರ ಅದು ದುಂಬಾಲು ಬಿದ್ದು ಭಾದಿಸುತ್ತದೆ. ಸಂಸಾರದಲ್ಲಿ ಪರಿಶುದ್ಧವಾದ ಆನಂದ ಮನುಷ್ಯನಿಗೆ ದೊರೆಯುವುದು ದುರ್ಲಭವೆಂತಲೇ ಹೇಳಬಹುದು. ಆನಂದದ ಭರ ಕುಗ್ಗಿದ ಮೇಲೆ ಆ ಆನಂದದಲ್ಲಿ ಚಿಂತೆ, ಶಂಕೆ ಮೊದಲಾದ ದುಃಖದ ಬೀಜಗಳು ಮೊಳಕೆಯೊಡೆದದ್ದು ಅನುಭವಕ್ಕೆ ಬಾರದಿರುವುದಿಲ್ಲ. 'ಒಮ್ಮೆ ಮನಸ್ಸು ದೋಷೈಕ್ಯ ದೃಷ್ಟಿಯಾಯಿತೆಂದರೆ? ಇಲ್ಲದ ಹುಳುಕುಗಳು ಅದಕ್ಕೆ ತೋರಹತ್ತುತ್ತವೆ'. 'ಮನೋಹಿ ಜನ್ಮಾಂತರ ಸಂಗತಿಜ್ಞಂ' ಅಂದರೆ? ಮನಸ್ಸು (ಸಂಬಂಧಿಗಳ) ಜನ್ಮಾಂತರದ ಸಂಗತಿಗಳನ್ನು ತಿಳಿಯುತ್ತದೆ. ಅಂದ ಮೇಲೆ ತನಗೆ ನೇರ ಸಂಬಂಧ ಪಟ್ಟ ವ್ಯಕ್ತಿಯ ಮನಸ್ಸಿನ ಸ್ಥಿತಿ-ಗತಿ ತಿಳಿಯದೇ ಇರುತ್ತದೆಯೇ? ಎನ್ನುವ ಮಹಾಕವಿ ಕಾಳಿದಾಸನ ಮಾತಿನಂತೆ, ರಾಮರಾಜನಲ್ಲಿ ಬದಲಾದ ಗುಣ-ಸ್ವಾಭಾವವನ್ನು ಅರಿತು, ತನ್ನ ಬದುಕು ಅತಂತ್ರವಾಗುವ ಲಕ್ಷಣಗಳು ಗೋಚರಿಸಿ ಆತಂಕದಿಂದ ಕುಂಜನವನದ ಪುಷ್ಕರಣಿಯಲ್ಲಿ 'ಏಕಾಂತ ಕ್ಷಣದಿ ನಾವು ಈಗ ನೌಕೆಯಲ್ಲಿ ಕುಳಿತು ದಂಡೆಗೆ ಹೋಗುವಾಗ ಒಬ್ಬರನ್ನೊಬ್ಬರು ಬಿಗಿಯಾಗಿ ಅಪ್ಪಿಕೊಳ್ಳಬೇಕು. ಹೀಗೆ ಅಪ್ಪಿಕೊಂಡಿರುವಾಗಲೇ ನೌಕೆಯು ಮುಳುಗಿ ಪುಷ್ಕರಣಿಯ ತಳವನ್ನು ಮುಟ್ಟಬೇಕು, ಅಂದರೆ ನನಗೆ ನಿಶ್ಚಿಂತೆಯಾಗುವುದು! ಎಂದು ಮನದ

ಇಂಗಿತವನ್ನು ಅರುಹಿದ್ದಳು. ವಿಶ್ವಾಸದ್ರೋಹದಿಂದಾಗಿ ಆತ್ಮಹತ್ಯೆಯ ಬಗ್ಗೆ ಯೋಚಿಸಿದಳಾದರೂ ಒಡಲ ಕುಡಿಯ ದೆಸೆಯಿಂದ ಅಂಥ ದುಸ್ಸಾಹಸಕ್ಕೆ ಕೈಹಾಕದೇ ತನ್ನ ಗಂಡನ ವಿರುದ್ಧವೇ ಸಮರವನ್ನು ಸಾರಿ ಕುಂಜನವನ್ನು ತೊರೆದು ಮಾರ್ಜಿನೆಯೊಂದಿಗೆ ವೇಷಾಂತರದಲ್ಲಿ ಸಾಗಿ ವಿಜಯಪುರವನ್ನು ಸೇರುತ್ತಾಳೆ. 'ಕೆಟ್ಟದ್ದನ್ನು ಅಟ್ಟವಳೇ ಜಾಣಳೆಂಬಂತೆ' ಈಗ ಕೆಟ್ಟು ಹೋಗಿರುವ ಬದುಕನ್ನು ತಿದ್ದಿಕೊಳ್ಳುವುದರಲ್ಲೇ ಜಾಣತನವುಂಟು ಎಂದು ಮಗನನ್ನು ಸಾಕಿ–ಸಲುಹಿ, ಸಕಲವಿದ್ಯಾಸಂಪನ್ನನ್ನನ್ನಾಗಿಸಿ ಸಮಯ ಸಾಧಿಸಿ ವಿಜಯಪುರ ಶಹಾನ ವಕೀಲನನ್ನಾಗಿಸಿ ಮತ್ತೆ ತನ್ನ ಕಾರ್ಯ ಸಾಧನೆಯ ನಿಮಿತ್ತ ಶಹಾನ ರಾಯಭಾರಿಯಾಗಿ ವಿಜಯನಗರಕ್ಕೆ ತನ್ನ ಮಗನೊಂದಿಗೆ ಆಗಮಿಸಿ ಕುಂಜನವನದಲ್ಲಿ ನೆಲೆಸುತ್ತಾಳೆ.

**ದುಷ್ಟ ಧನಮಲ್ಲ, ರಾಮರಾಜನ ನೆಚ್ಚಿನ ಸೇವಕ:**

'ಮೂವತ್ತು ವರುಷಗಳಿಂದ ನಾನು ನಿನ್ನ ಮೇಲಿನ ಆಸೆಯಿಂದ ಕಷ್ಟಪಟ್ಟು ಒಂದೇ ಸಮನೆ ಹುಡುಕಿ ಕೊಂಡು ತಿರುಗಿದೆ, ನಾಯಿಯ ಹಾಗೇ ನಿಮ್ಮ ಅಂತಃಪುರದ ಬಾಗಿಲು ಕಾಯುತ್ತ ಇಲ್ಲಿ ಬಿದ್ದಿರುತ್ತೇನೆ; ಆದರೆ ಈ ನಾಯಿಯು ರಾಮರಾಜನ ಅನ್ನಕ್ಕೆ ಜೋತು ಬಿದ್ದು ನಿಮ್ಮನ್ನು ಕಾಯುತ್ತಿರುತ್ತದೆಂದು ತಿಳಿಯಬೇಡಿರಿ. ಕೇವಲ ನಿಮ್ಮ ಮೇಲಿನ ಆಸೆಯಿಂದಲೇ ಈ ನಾಯಿ ನಿಮ್ಮನ್ನು ಕಾಯುತ್ತಿರುವುದು. ಕೃಷ್ಣಸರ್ಪವು ರಾಮರಾಜನ ಪ್ರಾಣ ಹರಣ ಮಾಡಿ ಮೇಹರ್‌ಜಾನ್‌ಳ ರೂಪವಾದ ಚಂದನ ವೃಕ್ಷವನ್ನು ಸುತ್ತು ಹಾಕಿದರೆ ಅದರ ಕೆಲಸ ತೀರಿತು' ಎಂಬ ಈತನ ಮನೋಗತ ಕಂಡು ಮೇಹರ್‌ಜಾನ್ ಹೌಹಾರಿದಳು.

**ನೂರ್‌ಜಹಾನ್‌ಳ ಶಾಪ:**

ರಾಮರಾಜನು ದರ್ಬಾರ್‌ನಲ್ಲಿ ವಿಚಾರಣೆಯ ಸಂದರ್ಭದಿ 'ಸ್ತ್ರೀಯರಲ್ಲಿ ಮುಜ್ಯಳಾದ ಪಠಾಣ ತರುಣೆಯ ಬುರ್ಕಾ ಬಿಚ್ಚಿಸಿದ ಅಪಮಾನದ ಪ್ರತಿಕಾರವಾಗಿ 'ಈ ವಿಜಯನಗರದ ರಾಜ್ಯವನ್ನು ಯಾವನು ನಷ್ಟಪಡಿಸುವನೋ? ಆ ಪುರುಷ ಶ್ರೇಷ್ಠನೇ ನನಗೆ ಪುನಃ ಬುರ್ಕಾವನ್ನು ಹೊದಿಸಲಿಕ್ಕೆ ಅಧಿಕಾರಿಯಾಗುವನು, ನಾನು ಒಬ್ಬ ಯಕಃಶ್ಚಿತ ಸ್ತ್ರೀಯು, ನನ್ನನ್ನು ಹಿಡಿದುಕೊಂಡು ಹೋಗಿ ಅಪಮಾನಗೊಳಿಸಿದ್ದರೂ ಮಹತ್ವವಿದ್ದಿಲ್ಲ; ಆದರೆ ಈವರೆಗೆ ನನ್ನಂಥ ಎಷ್ಟು ಜನರನ್ನು ಆ ದುಷ್ಟನು ಅಪಮಾನಗೊಳಿಸಿರುವನೋ ಯಾರಿಗೆ ಗೊತ್ತು? ಒಬ್ಬ ಸುಂದರಿಯ ಸಂಸಾರ ಗೇಡನ್ನು ಇದೇ ದುಷ್ಟನು ಇದೇ ಕುಂಜನವನದಲ್ಲಿ ಮಾಡಿದನೆಂಬುದು ನಾನು ಜನರ ಬಾಯಿಂದ ಕೇಳಿದ್ದೇನೆ. ಇದರ ಮೇಲಿಂದ ನೋಡುತ್ತಿರಲು, ನಮ್ಮ ಮುಸಲ್ಮಾನ ಜನರಲ್ಲಿ ರಕ್ಷಕರು ಯಾರೂ ಉಳಿಯಲಿಲ್ಲವೆಂದು ತಿಳಿಯುತ್ತೇನೆ'.

'ಸ್ತ್ರೀಯರು ಕೇವಲ ಪರಾಧೀನರು', 'ನಾನು ಯಕಃಶ್ಚಿತ ಸ್ತ್ರೀಯಾಗಿದ್ದರೂ

ನನ್ನಂಥ ತರುಣಿಯರಿಗೆ ನಾನು ಇದೇ ಮಾತನ್ನು ಉಪದೇಶಿಸುವೆನು. ಇನ್ನು ನಾನು ನನ್ನಿಷ್ಟಕ್ಕೆ ಸ್ವತಂತ್ರಳಾದೆನು. ಈಗ ನನ್ನನ್ನು ದಾನ ಮಾಡಲಿಕ್ಕೆ ನನ್ನ ತಂದೆ ಮಾಲೀಕನಲ್ಲ, ನನ್ನ ದಾನ ತೆಗೆದುಕೊಳ್ಳವುದಕ್ಕೆ ಯಾವ ಪುರುಷನೂ ಸಮರ್ಥನಲ್ಲ. ದಾನ ತೆಗೆದುಕೊಳ್ಳುವವನಲ್ಲಿ ದತ್ತು ಪಡೆದ ವಸ್ತುವಿನ ಸಂರಕ್ಷಣ ಮಾಡುವ ಶಕ್ತಿ, ಸಾಮರ್ಥ್ಯವು ಇರಬೇಕಾಗಿರುತ್ತದೆ ಅಲ್ಲವೇ? ಎಂದು ಪ್ರಶ್ನಿಸುತ್ತ ದಿಟ್ಟ ನಿಲುವನ್ನು ಪ್ರದರ್ಶಿಸಿ, ಪ್ರೀತಿಯಿಂದ ದ್ವೇಷದ ತಿದಿಯನ್ನು ಊದಿದಳು.

**ರಣಮಸ್ತ ಖಾನ್:**

ರಣಮಸ್ತಖಾನ್‌ನು ತನ್ನ ಪ್ರೀತಿಯ ಸಾಫಲ್ಯತೆಗಾಗಿ, ಪ್ರೇಯಸಿ ನೂರ್‌ಜಹಾನ್‌ಳಿಗಾದ ಅವಮಾನಕ್ಕೆ ಪ್ರತಿಯಾಗಿ ರಾಮರಾಜನ ರುಂಡವನ್ನು ತರುವುದಾಗಿ ಪ್ರತಿಜ್ಞೆಯನ್ನು ಮಾಡಿ, ವಿಜಯಪುರದ ಶಹಾನೊಂದಿಗೆ ಕಾರಸ್ಥಾನ ನಡೆಯಿಸಿ; ತಾಯಿಗೆ ಮೋಸ ಮಾಡಿದನೆಂದು ರಾಮರಾಜನೆದುರು ನಟಿಸಿ, ತನ್ನ ತಾಯಿಯನ್ನು ಕುರಿತು: 'ಆಕೆಯ ಕಾಲಿಗೆ ನನ್ನ ಮೈದೊಗಲ ಜೋಡುಮಾಡಿ ಹಾಕಿದರೂ ಆಕೆಯ ಉಪಕಾರ ತೀರದು! ಅವಳ ಸ್ವಭಾವವು ಪ್ರೇಮವಿದ್ದಷ್ಟೇ ಕಠೋರವು ಆಗಿರುವುದು. ಪ್ರೇಮ ಮಾಡುವ ಪ್ರಸಂಗದಲ್ಲಿ ಅವರು ಅತ್ಯಂತ ಪ್ರೇಮ ಮಾಡುವರು. ಪ್ರೇಮದ ಭರದಲ್ಲಿ ಅವರು ತಮ್ಮ ಜೀವದ ಹಂಗು ಸಹ ತೊರೆಯುವರು; ಆದರೆ ಯಾವುದೊಂದು ಕಾರಣದಿಂದ ಅವರು ಒಬ್ಬರನ್ನು ದ್ವೇಷಿಸಹತ್ತಿದರೆ, ತಿರುಗಿ ಮತ್ತೆಂದೂ ಅವರ ಮುಖಾವಲೋಕನವನ್ನು ಸಹ ಮಾಡಲಿಕ್ಕಿಲ್ಲ. ನನ್ನ ಮನಸ್ಸಿನೊಳಗಿನ ವಿಚಾರಗಳು ಅನ್ಯರಿಗೆ ಗೊತ್ತಾಗವು ಮಹಾರಾಜ, ನನ್ನ ತಾಯಿಯು ನನ್ನನ್ನು ಸಂರಕ್ಷಿಸುವಾಗ ಮಣ್ಣಿಗೆ ಮಣ್ಣು ಕೂಡಿದಳು. ಅಂಥವಳಿಗೆ ನಾನು ದ್ರೋಹವನ್ನು ಬಗೆದು ನಿಮ್ಮನ್ನು ಕೂಡಿಕೊಂಡಿರುವೆನು' ಎಂದು ರಾಮರಾಜನ ಸಖ್ಯವನ್ನು ಬೆಳೆಸುತ್ತಾನೆ.

**ವಿಜಯನಗರ ಸಾಮ್ರಾಜ್ಯದ ಅವನತಿಯ ಹಾದಿ:**

1543ರಲ್ಲಿ ರಾಮರಾಜನು ವಿಜಯಪುರದಿಂದ ರಾಯಚೂರು ಮತ್ತು ಕೃಷ್ಣ–ತುಂಗಭದ್ರಾ ಮಧ್ಯವರ್ತಿ ಪ್ರದೇಶಗಳನ್ನು ವಹಿಸಿಕೊಂಡನು. ಸೊಲ್ಲಾಪುರ ಅಹಮದ್ ನಗರಕ್ಕೆ ಧಕ್ಕಿತು, ರಾಯಚೂರು, ಮುದಗಲ್, ಕಲ್ಯಾಣ ಮತ್ತು ಸೊಲ್ಲಾಪುರಗಳಿಗಾಗಿ ಅಗಾಗ್ಗೆ ಪೈಪೋಟಿಗಳು ನಡೆಯುತ್ತಿದ್ದ ಸಂದರ್ಭದಲ್ಲಿ ರಾಮರಾಜನು ತನ್ನ ನೀತಿಯನ್ನು ಬದಲಿಸಿ (1557) ವಿಜಯಪುರ ದವರೊಂದಿಗೆ ಸ್ನೇಹ ಬೆಳೆಸಿದ್ದ.

ಗುರುತ್ವಾಕರ್ಷಣದ ವಿರುದ್ಧವಾಗಿ ಮೇಲಕ್ಕೇರಿದ ಕಲ್ಲು ಕೆಳಕ್ಕೆ ಬೀಳತಕ್ಕದ್ದೇ! ಅಂತೆಯೇ ಬಹುಜನರ ವಿರುದ್ಧವಾಗಿ ಏರಿದ ಮನುಷ್ಯನು ಎಂದಾದರೊಂದು ದಿನ ಕೆಳಗಿಳಿಯತಕ್ಕ ಸಂಬಂಧ ವಿಶೇಷವಾಗಿರುವುದು. 'ಸಗಣಿಯನ್ನು ಸಗಣಿಯಿಂದ

ತೊಳೆದು ಶುದ್ಧ ಮಾಡಲಿಕ್ಕೆ ಹೋಗುವವರ ಹಾಗೆ!' ಕನ್ನಡಿಗರಲ್ಲಿ ಸತ್ವಕ್ಕಿಂತ ವಿಷಯ ಲೋಲುಪತೆಯೂ, ಸೌಜನ್ಯಕ್ಕಿಂತ ಮತಾಂಧತೆಯೂ, ಪೌರುಷಕ್ಕಿಂತ ಡಾಂಭಿಕತೆಯೂ, ಸತ್ಯಕ್ಕಿಂತ ಮೋಸಗಾರಿಕೆಯೂ ವಿಶೇಷವಾಗಿದ್ದವು.

ಸೃಷ್ಟಿಕ್ರಮವಿಡಿದು ಬಹುದಿವಸ ಅವಾಢವ್ಯವಾಗಿ ಬೆಳೆದ ವೃಕ್ಷವು ಒಳಗಿಂದೊಳಗೆ ಟೊಕಳಿ ಹಾಯುವಂತೆ ದಕ್ಷಿಣದಲ್ಲಿ ಇಷ್ಟು ವರುಷ ವಿಸ್ತರಿಸಿದ್ದ ವಿಜಯನಗರದ ಸಾಮ್ರಾಜ್ಯ ಒಳಗಿಂದಲೇ ಶಿಥಿಲಗೊಂಡಿತ್ತು. ದೊಡ್ಡ ವೃಕ್ಷದ ನೆರಳೆಂದು ಬಹುಜನರು ಆಶ್ರಯಿಸಿದ್ದರೂ, ಗಿಡವು ಬಿರುಗಾಳಿಗೆ ಸಿಲುಕಿ ಬೀಳುವಾಗ ಗಿಡದ ಬುಡದಲ್ಲಿರುವವರು ತಪ್ಪಿಸಿಕೊಂಡು ಹೋಗುವವರೇ ಹೊರತು ಗಿಡದ ರಕ್ಷಣೆಗೆ ಯಾರೂ ಮುಂದೆ ಬಾರರು.

ಈ ಸುಲ್ತಾನರ ನಾಲ್ಕೂ ರಾಜ್ಯಗಳು ಒಂದಾಗಿ ವಿಜಯಪುರ ಬಳಿ ತಮ್ಮ ಸೈನ್ಯವನ್ನು ಜಮಾಯಿಸಿದವು. 1564 ಡಿಸೆಂಬರ್ 25 ರಂದು ಈ ಸಂಯುಕ್ತ ಸೈನ್ಯದಲ್ಲಿ ದಂಡಯಾತ್ರೆ ದಕ್ಷಿಣಕ್ಕೆ ಹೊರಟಿತು. ಇತ್ತ ರಾಮರಾಜನು ಮುಂದಾಗಿ ಈ ಅಪಾಯವನ್ನರಿತಿದ್ದ ಆಗ ಎಂಬತ್ತು ವರುಷದವನಾಗಿದ್ದ ಇವನು ಬೃಹತ್ ಸೈನ್ಯದೊಂದಿಗೆ ಸ್ವತಃ ರಣರಂಗಕ್ಕೆ ಹೊರಟ, ಇವನ ಸಹೋದರರಾದ ತಿರುಮಲ ಮತ್ತು ವೆಂಕಟಾದ್ರಿ ಕೃಷ್ಣೆಯನ್ನು ದಾಟಿ ತಾಳಿಕೋಟೆಯ ಹತ್ತಿರ ಮೂವರು ಸೈನ್ಯಸಮೇತರಾಗಿ ಯುದ್ದದ ಸಿದ್ದತೆಯೊಂದಿಗೆ ಒಂದು ತಿಂಗಳ ಕಾಲ ಉಭಯ ಸೈನ್ಯಗಳೂ ಪರಸ್ಪರ ಶಕ್ತಿಪರೀಕ್ಷೆ ಮತ್ತು ವ್ಯೂಹ ರಚನೆಯಲ್ಲಿ ತೊಡಗಿದವು.

**ರಣಮಸ್ತಖಾನ್ ಸಂಚು ಯುದ್ಧದ ಗತಿ ತಿರುವು:**

ಕೃಷ್ಣಾನದಿಯ ಬಳಿಯ ರಾಕ್ಷಸ ತಂಗಂಡಗಿ ಎಂಬಲ್ಲಿ ನಡೆದ ಯುದ್ಧದ ಸಂದರ್ಭದಿ ರಣಮಸ್ತಖಾನ್‌ನು ಕಾಲಹೊಳೆಯ ಕಡೆಗೆ ಒಂದು, ತುಂಗಭದ್ರೆಯ ನಿಟ್ಟಿನ ಕಡೆಗೆ ಮತ್ತೊಂದು ಎಂದು ಸೈನ್ಯವನ್ನು ವಿಭಾಗಿಸಿ ಕಳುಹಿಸಿ ದಾರಿತಪ್ಪಿಸುವ ಸಂಚು ರೂಪಿಸುತ್ತಾನೆ. ಹೊಟ್ಟೆಯ ಮಗನ ಮೇಲಿನ ಮಮಕಾರದಿಂದ ರಾಮರಾಜನು ಮೋಸ ಹೋಗುತ್ತಾನೆ. ಯುದ್ಧದಲ್ಲಿ ಕನ್ನಡಿಗರು ತೆಲುಗರು, ಮೈಸೂರಿನವರು, ಮಲೇಯಾಳಿಯವರು, ತಮಿಳರು, ಮುಸಲ್ಮಾನರು ಇದ್ದರು. ಪ್ರತಿ ದಂಡಿನ ನಾಯಕರುಗಳು ಬಂದು ತಮ್ಮ ತಮ್ಮ ದಂಡಿನ ನಾಯಕತ್ವವನ್ನು ವಹಿಸಿದ್ದರು. ರಣಮಸ್ತಖಾನ್‌ನ ನೇತೃತ್ವದ ದಂಡಿನಲ್ಲಿ ತುರ್ಕರು, ಸಿದ್ದಿಗಳು, ಅರಬರು, ಕಾಬೂಲದ ಪಠಾಣರು ಇದ್ದರು. ಯುದ್ದದ ಸಂದರ್ಭ ರಾಮರಾಜನ ಸೇನೆ ಮುದಗಲ್ ಕೋಟೆಯ ಸಮೀಪದಲ್ಲಿ ಬಿಡಾರ ಹೂಡಿತ್ತು. ತಾನೊಬ್ಬನೇ ಶತ್ರುವಿನ ದಂಡೆತ್ತಿ ಹೋಗಬೇಕು ಎನ್ನುವ ಸಾಹಸಕ್ಕೆ ಕೈಹಾಕಿದ್ದು ಮಹಾಪ್ರಮಾದವಾಯಿತು. ಹಿತಚಿಂತಕರುಗಳ ಮಾತಿನಂತೆ ತಿರುಮಲ ಮತ್ತು ವೆಂಕಟಾದ್ರಿಯರನ್ನು ತಮ್ಮ ಕಡೆಗೆ

ಬರುವಂತೆ ಸೂಚಿಸಿದ್ದು ರಣಮಸ್ತಖಾನ್‌ನಿಗೆ ಇದು ಕಳ್ಳನಿಗೆ ಮನೆ ಕಾವಲಿಯನ್ನು ವಹಿಸದಂತಾಯ್ತು. ಅವನು ಸುದ್ದಿ ಮುಟ್ಟಿಸದೇ ವಂಚಿಸಿದನು.

ಹಿಂದು ಸೈನ್ಯದ ಬಲಕ್ಕೆ ವಿಜಯಪುರದ ಆದಿಲ್‌ಶಹನ ಸೈನ್ಯವು, ಎಡಕ್ಕೆ ಬೀದರ್‌ನ ಬಾದಶಹಾನ ಸೈನ್ಯವು, ಕೇಂದ್ರ ಮಧ್ಯಸ್ಥಾನದಲ್ಲಿ ಸಾಗಲು ಅಹಮದ್ ನಗರದ ಹುಸೇನ್ ನಿಜಾಮಶಹನ ಸೈನ್ಯ ನಿಯೋಜಿಸಲ್ಪಟ್ಟಿತ್ತು. ಈ ಮೂರು ದಂಡುಗಳು ಮುಂದೆ ಬಿಲ್ಲಾಳುಗಳನ್ನು ನಿಲ್ಲಿಸಿ ಹಿಂದೆ ದೊಡ್ಡ ದೊಡ್ಡ ಸುಮಾರು 600 ತೋಪುಗಳನ್ನು ಹಿಂದು ಸೈನ್ಯಕ್ಕೆ ಕಾಣದಂತೆ ನಿಲ್ಲಿಸಿ ತೋಪಿನಲ್ಲಿ ತಾಮ್ರದ ದುಡ್ಡುಗಳನ್ನು ಹಾಕಿ ಹಾರಿಸಿ ಅಪಾರ ಜೀವಗಳ ಬಲಿ ತೆಗೆದುಕೊಂಡರು.

ಯುದ್ಧದ ಸಂದರ್ಭದಲ್ಲಿ ಸ್ವತಃ ರಾಮರಾಜನು ಯುದ್ಧಭೂಮಿಗೆ ಬಂದು ಆನೆಯ ಮೇಲಿನ ಪಲ್ಲಕ್ಕಿಯಲ್ಲಿ ಕುಳಿತು ಯುದ್ಧಭೂಮಿಯಲ್ಲಿ ಚಿನ್ನದ ನಾಣ್ಯಗಳನ್ನು ಸೈನಿಕರೆಡೆಗೆ ಎಸೆಯುತ್ತ ಅವರನ್ನು ಹುರಿದುಂಬಿಸುತ್ತಿದ್ದ ಸಮಯದಿ; ರಾಮರಾಯನು ಸೈನ್ಯದ ಮಧ್ಯಭಾಗದಲ್ಲಿದ್ದಾನೆ ಎಂಬುದು ಹುಸೇನ್ ನಿಜಾಂಶಹಾನಿಗೆ ತಿಳಿದು ಕೂಡಲೇ ರಾಮರಾಜನ ತಲೆಯನ್ನು ತಂದಕೊಟ್ಟವರಿಗೆ ಬಹುದೊಡ್ಡ ಇನಾಮು ನೀಡುವುದಾಗಿ ಢಂಗುರವನ್ನು ಸಾರಿದನು. ಆಗ ದಂಡಿನವರು ಆವೇಶದಿಂದ ಮುನ್ನುಗ್ಗಿದಾಗ ನಿಜಾಂಶಹಾನ ಆನೆಯು ಬೆದರಿ ಕಾಕತಾಳೀಯವೆಂಬಂತೆ ರಾಮರಾಜನು ಇದ್ದ ಕಡೆಗೇ ನುಗ್ಗಿತು ಆಗ ಆಪ್ತರಕ್ಷಕರು ಅವನನ್ನು ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಓಡತೊಡಗಿದರು. ಆಗ ನಿಜಾಂ ಶಹಾನು ಬೆನ್ನು ಹತ್ತುತ್ತಾನೆ, ಅಲ್ಲಿಂದ ಪಲ್ಲಕ್ಕಿಯಿಂದ ಇಳಿದು ರಥವನ್ನು ಏರಿ ಹೋಗುವುದನ್ನು ಕಂಡು ಜನರು ಹೆದರಿ ಬೆನ್ನು ತೋರಿಸಿ ಓಡಿದಾಗ ರಣಮಸ್ತಖಾನ್‌ನು ಓಡಿಬರುವ ಹಿಂದು ಸೈನ್ಯವನ್ನು ಧ್ವಂಸಗೊಳಿಸಲು ತನ್ನ ಅರಬ್ ಮತ್ತು ಪಠಾಣ ದಂಡುಗಳಿಗೆ ಸೂಚಿಸುತ್ತಾನೆ. ವಿಶ್ವಾಸ ಘಾತಕತನದಿಂದ ಹಿಂದು ಸೈನ್ಯ ಅಡ್ಡ ಕತ್ತರಿಯಲ್ಲಿ ಸಿಕ್ಕು ಮಣ್ಣು ಪಾಲಾಯಿತು. ಅದೇ ಸಂದರ್ಭದಿ ರಾಮರಾಜನ ರಥವನ್ನು ಕಂಡ ಖಾನ್‌ನು 150 ಜನ ಅಶ್ವದಳದವರೊಂದಿಗೆ ಬೆನ್ನು ಹತ್ತುತ್ತಾನೆ. ರಾಮರಾಜನ ಕುದುರೆಯ ಕಾಲುಮುರಿದು ಅದು ನಿಂತು ಬಿಡುತ್ತದೆ. ರಕ್ಷಕರು ಹೆದರಿ ಒಬ್ಬೊಂಟಿಯಾಗಿ ಇವನ್ನನ್ನು ಬಿಟ್ಟು ಓಡಿಹೋದರೂ ರಾಮರಾಜ ಎದೆಗುಂದದೆ ಕಾದಾಡುತ್ತಿದ್ದಾಗ ಆತನ ಎಡಗೈ ಕತ್ತರಿಸಿಹೋಗುತ್ತದೆ.

ಇದೇ ಸರಿಯಾದ ಸಮಯ ನನ್ನ ಪ್ರತಿಜ್ಞೆಯನ್ನು ನೆರವೇರಿಸಲು ಎಂದು ಸಂತಸದಿ ಖಾನ್ ಹುಮ್ಮಸ್ಸಿನಿಂದ ತನ್ನ ಖಡ್ಗವನ್ನು ತೆಗೆದು ರಾಮರಾಜನ ಮುಂಡಾಸನ್ನು ಎಗರಿಸಿ, ಆತನ ಚಂಡಿಕೆಯನ್ನು ಹಿಡಿದು ಒಂದೇ ಏಟಿಗೆ ರುಂಡವನ್ನು ಹಾರಿಸಿದನು. ಆ ರುಂಡವು ಮಗನೆ, ಮಗನೇ ನೀನು ನನ್ನನ್ನು ಕೊಂದೆಯಾ? ಎಂದು

ಕಣ್ಮುಚ್ಚಿತು. ಈ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯದ ಪತನವಾಗುವದರೊಂದಿಗೆ, ದಕ್ಷಿಣ ಭಾರತದ ಕೊನೆಯ ಹಿಂದು ಸಾಮ್ರಾಜ್ಯವು ಕೊನೆಗೊಂಡಿತು. ಈ ಕುರಿತಾಗಿ ವಿಜಯನಗರ ಸಾಮ್ರಾಜ್ಯದ ಒಂದೇ ಒಂದು ಯುದ್ದದಲ್ಲಿ ಅಂಥ ಪ್ರಬಲ ಸಾಮ್ರಾಜ್ಯ ಮಸುಕಾಯಿತು. ಅಲ್ಲಿಂದ ಮುಂದೆ ಹಲವು ದಶಕಗಳ ಕಾಲ ವಿಜಯನಗರ ರಾಜವಂಶವು ಮುಂದುವರೆದರೂ ಹಿಂದಿನ ಗತವೈಭವವು ಮತ್ತೆ ಕೂಡಿ ಬರಲಿಲ್ಲ. ಈ ಐತಿಹಾಸಿಕ ದುರಂತಕ್ಕೆ ರಾಮರಾಜನು ಬಹಳಷ್ಟು ಮಟ್ಟಿಗೆ ಕಾರಣನಾದನೆಂಬುದು ಹಲವು ಇತಿಹಾಸಕಾರರ ಅಭಿಪ್ರಾಯ. ರಾಮರಾಜನು ಅಪ್ರತಿಮ ವೀರ, ರಣಭಯಂಕರ, ನೂರು ಸಮರಗಳ ವೀರ, ಮುಂತಾದ ಬಿರುದುಗಳಿಗೆ ಭಾಜಜನಾಗಿದ್ದನು. ಇವನು ದಖ್ಖನ್ನಿನ ರಾಜಕೀಯದಲ್ಲಿ ದೊಡ್ಡಣ್ಣನ ಪಾತ್ರವಹಿಸಿದ್ದು ಸುಳ್ಳಲ್ಲ. ಈ ಬಗ್ಗೆ ರಾಬರ್ಟ್ ಸಿವೇಲ್ ಎಂಬ ಪ್ರಸಿದ್ದ ಇತಿಹಾಸಕಾರ ಮರೆತು ಹೋದ ಸಾಮ್ರಾಜ್ಯವೆಂಬ ಅದ್ಭುತವಾದ ಪುಸ್ತಕವನ್ನು ಬರೆದಿದ್ದಾರೆ.

**ರಾಗ-ದ್ವೇಷ, ಜೀವ ಸಮಾಧಿಯ ಸಂಕೇತ ಕುಂಜನವನದ ಪುಷ್ಕರಣಿ:**

ರಣಮಸ್ತಖಾನ್‌ನು ತನ್ನ ಪ್ರತಿಜ್ಞೆಯನ್ನು ನೆರವೇರಿಸಿ ವಿಜಯದ ಉತ್ಸಾದಿ ರಾಮರಾಜನ ರುಂಡವನ್ನು ತನ್ನ ಕುದುರೆಗೆ ಕಟ್ಟಿಕೊಂಡು ಇರುಳೊತ್ತಿಗೆ ಕುಂಜನವನಕ್ಕೆ ಧಾವಿಸುತ್ತಾನೆ. ಪುಷ್ಕರಣಿಯನ್ನು ದಿಟ್ಟಿಸುತ್ತ ಕುಳಿತಿರುವ ತಾಯಿ ಮತ್ತು ಅಜ್ಜಿ, ಪ್ರೇಯಸಿಯನ್ನು ಕಂಡು ರುಂಡವನ್ನು ಚಂಡಾಡಿದೆ ಎಂದು ತೋರಿಸಿದಾಗ ನಿನ್ನ ತಂದೆಯನ್ನೇ ನೀನು ಕೊಂದುಬಿಟ್ಟೆಯಲ್ಲ ಮಗನೇ ಎಂದು, ಮೇಹರ್‌ಜಾನ್‌ಳು ಆ ರುಂಡವನ್ನು ಬಿಗಿದಪ್ಪಿ, ಹಣೆಗೆ ಮುತ್ತಿಟ್ಟು ರುಂಡದೊಂದಿಗೆ ತಾನು ಪುಷ್ಕರಣಿಗೆ ಹಾರಿ ಪ್ರಾಣ ಬಿಡುತ್ತಾಳೆ. ತನ್ನ ಮಗಳ ಹಿಂದೆಯೇ ಮಾರ್ಜಿನೆಯೂ ಕೂಡ ಪುಷ್ಕರಣಿಗೆ ಹಾರಿ ಪ್ರಾಣ ಬಿಡುತ್ತಾಳೆ. ಇದೆಲ್ಲವನ್ನು ಕಂಡು ಹೆದರಿದ ನೂರ್‌ಜಹಾನ್‌ಳು ಇವನ ತಂದೆ ಹಿಂದೂವೆಂದು ತಿಳಿದೋ? ಅಥವ ತನ್ನ ತಂದೆಯನ್ನೇ ಕೊಂದ ಕ್ರೂರಿಯೊಂದಿಗೆ ಬದುಕುವುದು ಹೇಗೆಂದು? ಭಯ-ಭೀತಳಾಗಿ ಹೆದರಿ ತಪ್ಪಿಸಿಕೊಂಡು ಹೋಗಬೇಕೆಂದು ಯೋಚಿಸುತ್ತಿರುವಾಗಲೇ ನಿನಗಾಗಿಯೇ ನಾನು ಇಂಥ ದುಸ್ಸಾಹಸಕ್ಕೆ ಕೈಹಾಕಿ ನನ್ನ ತಾಯಿ-ಅಜ್ಜಿ ಅಷ್ಟೇ ಅಲ್ಲದೇ ನನ್ನ ತಂದೆಯನ್ನು ನನ್ನ ಕೈಯಾರೆ ಕೊಲ್ಲುವಂತೆ ಮಾಡಿದ್ದೇ ನೀನು, ಈಗ ನೀನು ನನ್ನನ್ನು ತೊರೆದು ಹೋಗಲು ಬಯಸುತ್ತಿರುವೆಯಾ? ಎಂದು ಇಂದು ಬಿಡದೇ ನಿನ್ನನ್ನು ದಕ್ಕಿಸಿಕೊಳ್ಳುತ್ತೇನೆಂದು ಬಿಗಿದಪ್ಪಿಕೊಂಡೇ ಪುಷ್ಕರಣಿಗೆ ಹಾರುತ್ತಾನೆ ಈ ರೀತಿಯಲ್ಲಿ ರಾಮರಾಜ ಮತ್ತು ಮೇಹರ್‌ಜಾನ್‌ಳ ಭಗ್ನಪ್ರೇಮಕ್ಕೆ ಸರಸ-ಸಲ್ಲಾಪ, ವಿರಸ-ವಿರಹದೊಂದಿಗೆ, ಮಗನಾದ ರಣಮಸ್ತಖಾನ್ ಮತ್ತು ನೂರ್‌ಜಹಾನ್ ಇದಕ್ಕೆ ಮೂಕ ಸಾಕ್ಷಿಯಾಗಿ, ಐವರನ್ನು ತನ್ನಲ್ಲಿಯೇ ಕರಗಿಸಿಕೊಂಡು ರಾಗ-ದ್ವೇಷದ ಸಂಕೇತವೆನಿಸಿದೆ ಕುಂಜನ ವನದ ಪುಷ್ಕರಣಿ.

**ಎಣಿಕೆಗೆ ನಿಲುಕದ ಸಂಪತ್ತು:**

'ರಾಕ್ಷಸ ತಂಗಡಿಗಿ' ಯುದ್ಧದ ತರುವಾಯ ವಿಜಯನಗರದಲ್ಲಿ ನಡೆದ ಸುಲಿಗೆಯಲ್ಲಿ ಅಗಣಿತ ಸಂಪತ್ತು ಸುಲಿಯಲ್ಪಟ್ಟಿತ್ತು. ಅದರಲ್ಲಿ ಸಿಕ್ಕ ಒಂದು ರತ್ನ ಕೋಳಿಯ ತತ್ತಿಯಷ್ಟು ಇತ್ತು. ಈ ರತ್ನವನ್ನು ರಾಮ ರಾಜನು ತನ್ನ ಕುದುರೆಯ ಶಿರೋಭೂಷಣದಲ್ಲಿಯೇ ಇಷ್ಟು ದೊಡ್ಡ ರತ್ನವಿದ್ದ ಬಳಿಕ ರಾಜ ಗೃಹದಲ್ಲಿಯೂ, ಧನಿಕರ ಮನೆಗಳಲ್ಲಿಯೂ ಎಷ್ಟು ಸಂಪತ್ತು ಕೂಡಿ ಬಿದ್ದಿತ್ತೆಂಬುದನ್ನು ನಮ್ಮಂಥ ದರಿದ್ರರು ಕಲ್ಪಿಸುವುದು ಅಸಾಧ್ಯವೇ ಸರಿ! ಅರಸರೇನು?, ದರಿದ್ರರೇನು? ಕರ್ಮಫಲವನ್ನು ಅವರವರೇ ಭೋಗಿಸಿಯೇ ತೀರಬೇಕು!

**ಅವನತಿಯ ನಿಗೂಢ ಅಂಶಗಳು:**

ಯುದ್ಧಕ್ಕೆ ಹೊರಡುವಾಗ ರಾಜತಾಂತ್ರಿಕ ನಿಪುಣನೆನಿಸಿದ ರಾಮರಾಜನು ಜಗತ್ತಿನ ಶ್ರೀಮಂತ ಸಾಮ್ರಾಜ್ಯ ರಕ್ಷಣೆಗೆ ಯಾವೊಂದು ಸೈನ್ಯವನ್ನು ಅರಮನೆಯ ಬಳಿ ನಿಯಮಿಸದೇ ಹೋಗಿದ್ದನೇ? ಬಹುಮನಿ ಸುಲ್ತಾನರು ಬಂದು ವಿಜಯನಗರ ಸಾಮ್ರಾಜ್ಯದ ಸಂಪತ್ತನ್ನೆಲ್ಲ ಹೊತ್ತೊಯ್ದರು ಎಂದು – ಹೇಳುವುದು ಬರಿ ಸುಳ್ಳು, ಏಕೆಂದರೆ ಸಂಪತ್ತಿನ ಲೂಟಿ ಶುರುವಾಗುವುದು ಒಳಗಿನವರಿಂದಲೇ ಹೊರತು, ಹೊರಗಿನವರಿಂದಲ್ಲ. ರಾಮರಾಜನ ತಮ್ಮ ತಿರುಮಲನು ಯುದ್ಧದಲ್ಲಿ ಸೋತೆವು ಎಂಬುದು ತಿಳಿಯುತ್ತಿದ್ದಂತೆಯೇ ಹಂಪೆಗೆ ಓಡಿಹೋಗಿ ಸಾವಿರದ ಐನೂರು ಆನೆಗಳ ಮೇಲೆ ಅಲ್ಲಿನ ಸಂಪತ್ತನ್ನು ಪೆನುಕೊಂಡಗೆ ಸಾಗಿಸುತ್ತಾನೆ. ಹೀಗೆ ಮೂರು ದಶಕಗಳ ಕಾಲ ಇಡೀ ಜಗತ್ತಿನಲ್ಲಿ ಶ್ರೀಮಂತಿಕೆಯ ವೈಭೋಗದಲ್ಲಿ ಮೆರೆದ ಸಾಮ್ರಾಜ್ಯ ಅವನತಿ ಕಂಡಿದ್ದರ ಸುತ್ತಮುತ್ತ ಕೆಲ ನಿಗೂಢ ಪ್ರಶ್ನೆಗಳು ಕೆದಕುವ ಪ್ರಯತ್ನವಾಗಿ ಈ ರಾಕ್ಷಸ ತಂಗಡಗಿ ಎನ್ನುವ ನಾಟಕವನ್ನು ಗಿರೀಶ್ ಕಾರ್ನಾಡ್‌ರು ಬರೆದಿರುತ್ತಾರೆ.

ಒಟ್ಟಂದದಲ್ಲಿ ಗಳಗನಾಥರ 'ಕನ್ನಡಿಗರ ಕರ್ಮಕಥೆ' ಐತಿಹಾಸಿಕ ಕಾದಂಬರಿಯು ನಿಜಕ್ಕೂ ವಿಜಯನಗರ ಸಾಮ್ರಾಜ್ಯದ ಅವನತಿಗೆ ಕಾರಣವಾದ ಸೂಕ್ಷ್ಮ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಸವಿಸ್ತಾರವಾಗಿ, ಎಲ್ಲಿಯೂ ಕೂಡ ಅತಿಶಯೋಕ್ತಿ ಎನಿಸದಂತೆ ವಾಸ್ತವ ಸಂಗತಿಯನ್ನು ಅರುಹಿದ್ದಾರೆ. ರಾಜ್ಯಾಧಿಕಾರ, ಸಂಪತ್ತಿಗಾಗಿ ಅಲ್ಲದೇ ಕಾಮ–ಪ್ರೇಮಗಳೇ ಪ್ರಬಲ ಕಾರಣವಾಗಿರುವುದನ್ನು, 'ಒಲಿದರೆ ನಾರಿ ಮುನಿದರೆ ಮಾರಿ' ಯಾಗುವ ಸಂದರ್ಭವನ್ನು, ಯಕಃಶ್ಚಿತ್ ಎಂದು ತಿಳಿದ, ಮಾನ–ಅಪಮಾನದ ಬೆಂಕಿಯಲ್ಲಿ ಬೆಂದ–ನೊಂದ ಒಂದು ಹೆಣ್ಣಿನ ಕಣ್ಣೀರು ಅದ್ಹೇಗೆ? ಒಂದು ವಿಶಾಲ ಸಾಮ್ರಾಜ್ಯದ ಅವನತಿಗೆ ಕಾರಣವಾಯಿತು ಎಂಬುದನ್ನು ತಿಳಿಯಬಹುದಾಗಿದೆ. ನಾಡಿನ ಚರಿತ್ರೆಯನ್ನು ತಿಳಿಸುವಲ್ಲಿ ಪ್ರಧಾನ ಪಾತ್ರವಹಿಸುವ ಈ ಕೃತಿ ಮಹತ್ತ್ವದ್ದಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಪಂಡಿತ ಗಳಗನಾಥರು, (2011), ಕನ್ನಡಿಗರ ಕರ್ಮಕಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
2. ಸಂಕ್ಷಿಪ್ತ ಕನ್ನಡ ನಿಘಂಟು, (1975), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.